# 15. ನಮ್ಮ ಹೊಲ

- ಎ.ಕೆ. ರಾಮೇಶ್ವರ

ಹಚ್ಚ ಹಸಿರು ನಮ್ಮ ಹೊಲ
ಹೊಡೆಯ ತೆಗೆದು ನಿಂತಿದೆ
ಬಿಂಕಿನಿಂದ ಸುಂಕ ಸುತ್ತಿ
ಕಾಳು ಹಾಲು ತುಂಬಿದೆ

ತೆನೆಯ ಮೇಲೆ ಹಕ್ಕಿ ಕುಳಿತು
ಕಾಳು ಕುಕ್ಕಿ ತಿನುವದು
ಕವಣೆಯಿಂದ ಕಲ್ಲು ಎಸೆದು
ಅಕ್ಕ ಹಕ್ಕಿ ಹೊಡೆವಳು

ಮೊಸರು ರೊಟ್ಟಿ ಬುತ್ತಿಯನ್ನು
ಅಕ್ಕ ಉಣಲು ತರುವಳು
ಹಕ್ಕಿ ಹೊಡೆದು ದಣಿದು ತಾನು
ಕುಳಿತು ಹಾಡುತಿರುವಳು

ಅಪ್ಪ ಬರಲು ಬೆಳಸಿ ತಿಂದು
ಮನೆಯ ಹಾದಿ ಹಿಡಿವಳು
ನಮ್ಮ ಹೊಲದ ಬೆಳೆಯ ಸೊಬಗು
ಕಂಡು ಮನದಿ ನಲಿವಳು

**ಶಬ್ದಗಳ ಅರ್ಥ:**

ಸುಂಕ - ಧಾನ್ಯದ ಹೊಟ್ಟು; ಕವಣೆ = ಕಲ್ಲನ್ನಿಟ್ಟು ಬೀಸಿಹೊಡೆಯುವ ಹಗ್ಗದ ಉಪಕರಣ (ಕವೆಗೋಲು); ಬೆಳಸಿ = ರಸತುಂಬಿದ ಕಾಳು (ಹಾಲುಗಾಳು)

ಪಠ್ಯಾಧಾರಿತ ಪದ್ಯವನ್ನು ಓದಿಕೊಂಡು ಕೆಳಗಿನ ಕೃತಿಗಳನ್ನು ಸೂಚನೆಗೆ ಅನುಗುಣವಾಗಿ ಬಿಡಿಸಿರಿ.

## ಅಭ್ಯಾಸ

**ಕೃತಿ 1) I. ಕೆಳಗಿನ ಜಾಲಾಕೃತಿ ತುಂಬಿರಿ.**

ಬುತ್ತಿಯಲಿ ಬಂದಿರುವ ಆಹಾರ ಪದಾರ್ಥಗಳು

| | |
|---|---|
| | |

**II. ಪದ್ಯದ ಆಧಾರದಿಂದ ಹೊಲದ ವರ್ಣನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

..........................................................................................................
..........................................................................................................
..........................................................................................................
..........................................................................................................

**III. ನಿಮಗೆ ಹೊಲದಲ್ಲಿ ಆದ ಅನುಭವಗಳನ್ನು ಐದಾರು ವಾಕ್ಯಗಳಲ್ಲಿ ಸಾದರ ಪಡಿಸಿರಿ.**

..........................................................................................................
..........................................................................................................
..........................................................................................................
..........................................................................................................

ಕೃತಿ 2) I. ಕೆಳಗಿನ ವಾಕ್ಯಗಳಲ್ಲಿ ಸರಿ ತಪ್ಪು ಗುರುತಿಸಿ ಹೇಳಿರಿ.

1) ಹೊಲವು ಅಚ್ಚು ಕೆಂಪಾಗಿ ಕಾಣಿಸುತ್ತಿತ್ತು

ಉತ್ತರ: ......................................................................................................................

2) ಹಕ್ಕಿ ಹೊಡೆಯಲು ಕವಣೆ ಉಪಯೋಗಿಸುವರು

ಉತ್ತರ: ......................................................................................................................

3) ಅಣ್ಣನು ಬುತ್ತಿಯನ್ನು ತಂದನು

ಉತ್ತರ: ......................................................................................................................

4) ಅಕ್ಕನು ಶಾಲೆಯ ಹಾದಿ ಹಿಡಿದಳು

ಉತ್ತರ: ......................................................................................................................

II. ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ.

| | |
|---|---|
| 1) ಜೋಳ, ತೊಗರಿ, ಹೆಸರು, ಕಡಲೆ | |
| 2) ಹೊಲ, ಗದ್ದೆ, ತೋಟ, ಉದ್ಯಾನ | |
| 3) ಸನಿಕೆ, ಗುದ್ದಲಿ, ಬಂದೂಕ, ಕೊಡಲಿ | |
| 4) ಕೆರೆ, ಶಾಲೆ, ಹಳ್ಳ, ಬಾವಿ | |

ಕೃತಿ 3) I. ಕೆಳಗಿನ ಶಬ್ದಗಳ ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.

ರೈತ .................................. ..................................

ಅಕ್ಕ .................................. ..................................

ಮನೆ .................................. ..................................

ನಲಿ .................................. ..................................

II. ನಿಮ್ಮ ಶಾಲೆಯಲ್ಲಿ ಕೈಕೊಂಡ ವನಭೋಜನದ ಕುರಿತು ನಿಮ್ಮ ಅಕ್ಕನಿಗೆ ಒಂದು ಪತ್ರ ಬರೆಯಿರಿ.

......................................................................................................................

......................................................................................................................

......................................................................................................................

......................................................................................................................

......................................................................................................................


ಉಪಕ್ರಮ : ಅಕ್ಕ-ತಮ್ಮನ ಬಾಂಧವ್ಯವನ್ನು ಕುರಿತು ಹತ್ತು ಸಾಲುಗಳನ್ನು ಬರೆಯಿರಿ.

INCZF4

# ಸಂಧಿಗಳು

ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ. ಅರ್ಥಕೆಡದಂತೆ ಪರಸ್ಪರ ಕೂಡಿಕೊಳ್ಳುವುದಕ್ಕೆ ಸಂಧಿ ಎನ್ನುವರು. ಸಂಧಿಗಳನ್ನು ಕನ್ನಡ ಸಂಧಿ ಮತ್ತು ಸಂಸ್ಕೃತ ಸಂಧಿ ಎಂದು ಎರಡು ಪ್ರಕಾರಗಳಲ್ಲಿ ವಿಂಗಡಿಸುವರು.

**ಕನ್ನಡ ಸಂಧಿಗಳು :-**




**ಸ್ವರಸಂಧಿಗಳು :-**

ಸ್ವರದ ಮುಂದೆ ಸ್ವರ ಬಂದಾಗ ಸ್ವರ ಸಂಧಿಯಾಗುವವು. ಇದರಲ್ಲಿ ಲೋಪ ಮತ್ತು ಆಗಮ ಸಂಧಿಗಳೆಂಬ ಎರಡು ವಿಧ.

**(1) ಲೋಪ ಸಂಧಿ:**

ಸ್ವರದ ಮುಂದೆ ಸ್ವರ ಬಂದಾಗ ಪೂರ್ವಪದದ ಕೊನೆಯ ಸ್ವರ ಲೋಪವಾಗುವುದು. ಇದಕ್ಕೆ ಸ್ವರಲೋಪ ಸಂಧಿ ಎನ್ನುವರು.

ಉದಾ:- ಪೂರ್ವಪದ + ಉತ್ತರ ಪದ = ಸಂಧಿ

ಮರ + ಅನ್ನು = ಮರವನ್ನು

ಇಲ್ಲ + ಒಂದು = ಇಲ್ಲೊಂದು

**(2) ಆಗಮ ಸಂಧಿ:**

ಸ್ವರದ ಮುಂದೆ ಸ್ವರ ಬಂದು ಸಂಧಿಯಾಗುವಾಗ ಅರ್ಥ ಕೆಡುವಂತದ್ದರೆ ಪದ ಮಧ್ಯದಲ್ಲಿಯ ವ ಕಾರವನ್ನು ಹೊಸದಾಗಿ ಸೇರಿಸಿಕೊಳ್ಳುವದು. ಯಕಾರವನ್ನು ಸೇರಿಸಿದರೆ ಯಕಾರಾಗಮ ಸಂಧಿ. ವಕಾರವನ್ನು ಸೇರಿಸಿದರೆ ವಕಾರಾಗಮ ಸಂಧಿ ಎಂದು ಕರೆಯುವರು.

ಉದಾ:- ಗಿಡ + ಅನ್ನು = ಗಿಡವನ್ನು

ಶಾಲೆ + ಅನ್ನು = ಶಾಲೆಯನ್ನು

**ಯಕಾರಾಗಮ ಸಂಧಿ :** ಆ, ಇ, ಈ, ಎ, ಏ, ಐ, ಓ ಸ್ವರಗಳ ಮುಂದೆ ಸ್ವರ ಬಂದಾಗ ಯಕಾರಾಗಮವಾಗುವುದು.

ಉದಾ :- ಸರಿ + ಆಗಿ = ಸರಿಯಾಗಿ

ಮನೆ + ಅನ್ನು = ಮನೆಯನ್ನು

**ವಕಾರಾಗಮ ಸಂಧಿ :** ಉ, ಊ, ಋ, ಓ, ಔ ಸ್ವರಗಳ ಮುಂದೆ ಸ್ವರ ಬಂದರೆ ವಕಾರಾಗಮವಾಗುವುದು.

ಉದಾ:- ಕಾಲ + ಅನ್ನು = ಕಾಲವನ್ನು

ಆನಂದ + ಅನ್ನು = ಆನಂದವನ್ನು

### ವ್ಯಂಜನ ಸಂಧಿಗಳು :-

**ಆದೇಶ ಸಂಧಿ :-** ವ್ಯಂಜನದ ಮುಂದೆ ವ್ಯಂಜನ. ವ್ಯಂಜನದ ಮುಂದೆ ಸ್ವರ ಇಲ್ಲವೆ ಸ್ವರದ ಮುಂದೆ ವ್ಯಂಜನ ಬಂದರೆ ವ್ಯಂಜನ ಸಂಧಿಯಾಗುವುದು. ವ್ಯಂಜನ ಸಂಧಿಗಳಲ್ಲಿ ಒಂದು ವ್ಯಂಜನದ ಸ್ಥಾನದಲ್ಲಿ ಇನ್ನೊಂದು ವ್ಯಂಜನ ಬರುವುದು. ಇದಕ್ಕೆ 'ಆದೇಶ ಸಂಧಿ' ಎಂದು ಕರೆಯುವರು.

ಉದಾ :- ಚಳಿ + ಕಾಲ = ಚಳಿಗಾಲ

ತಲೆ + ತೂಗು = ತಲೆದೂಗು.

ವ್ಯಂಜನ ಸಂಧಿಗಳಲ್ಲಿ ಗದಬ ಸಂಧಿ, ವಕಾರಾದೇಶ ಸಂಧಿ, ಜಚಫಕರಾದೇಶ ಸಂಧಿಗಳೆಂದು ಮೂರು ಪ್ರಕಾರಗಳಿವೆ.

### ಸಂಸ್ಕೃತ ಸಂಧಿ:-

**(1) ಸವರ್ಣದೀರ್ಘ ಸಂಧಿ:**

ಸವರ್ಣ ಸ್ವರಗಳು ಒಂದರ ಮುಂದೆ ಒಂದು ಬಂದು ಸಂಧಿಯಾಗುವಾಗ ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘಸ್ವರವು ಆದೇಶವಾಗಿ ಬರುವುದು. ಇದಕ್ಕೆ ಸವರ್ಣದೀರ್ಘ ಸಂಧಿ ಎನ್ನುವರು.

ಉದಾ :- ನಂದಿ + ಈಶ = ನಂದೀಶ

ಮಹಾ + ಆತ್ಮ + ಮಹಾತ್ಮ

**(2) ಗುಣ ಸಂಧಿ:-**

ಅ, ಆ ಕಾರಗಳ ಮುಂದೆ ಇ, ಈ ಕಾರಗಳು ಬಂದಾಗ 'ಏ' ಕಾರ ಉ, ಊ ಕಾರಗಳು ಬಂದರೆ 'ಓ' ಕಾರವು, ಋ, ಕಾರ ಬಂದರೆ 'ಅರ್ ಆದೇಶವಾಗಿ ಬರುತ್ತದೆ. ಇದಕ್ಕೆ ಗುಣಸಂಧಿ ಎಂದು ಹೆಸರು.

ಉದಾ:- ಸೂರ್ಯ + ಉದಯ = ಸೂರ್ಯೋದಯ

ನಾಗ + ಇಂದ್ರ = ನಾಗೇಂದ್ರ

ಪಿತೃ + ರ್ಜಿತ = ಪಿತ್ರಾರ್ಜಿತ

## ವಾಕ್ಯ ಪ್ರಯೋಗಗಳು

### ಕರ್ತರಿ ಪ್ರಯೋಗ:-

ಕ್ರಿಯಾಪದವು ಕರ್ತೃಪದದ ಲಿಂಗ, ವಚನಗಳನ್ನು ಅನುಸರಿಸಿ ಪ್ರಯೋಗಗೊಂಡಿದ್ದರೆ ಅದನ್ನು ಕರ್ತರಿ ಪ್ರಯೋಗ ಎನ್ನುತ್ತಾರೆ.

ಉದಾ:- (1) ಹುಡುಗರು ಪ್ರವಾಸಕ್ಕೆ ಹೋದರು

(2) ನಾಯಿಯು ರೊಟ್ಟಿಯನ್ನು ತಿಂದಿತು.

### ಕರ್ಮಣಿ ಪ್ರಯೋಗ:-

ಕನ್ನಡದಲ್ಲಿ ಸಹಜವಾಗಿ ಕರ್ಮಣಿ ಪ್ರಯೋಗವಿಲ್ಲ, ಅಲ್ ಪ್ರತ್ಯಯ ಸೇರಿದ ಭಾವಾರ್ಥಕ್ರಿಯೆಗೆ ಪಡು ಪ್ರತ್ಯಯ ಸೇರಿಸಿ ಈ ಪ್ರಯೋಗವನ್ನು ಕನ್ನಡದಲ್ಲಿ ತರಲು ಪ್ರಯತ್ನಿಸಲಾಗಿದೆ.

ಕರ್ಮಣಿ ಪ್ರಯೋಗದಲ್ಲಿ ಕರ್ಮಪದವು ಪ್ರಧಾನವಾಗಿರುತ್ತದೆ. ಕರ್ಮಪದವು ಪ್ರಥಮಾ ವಿಭಕ್ತಿ ಪ್ರತ್ಯಯದಲ್ಲಿಯ ಕರ್ತೃಪದವು ತೃತೀಯಾ ವಿಭಕ್ತಿ ಪ್ರತ್ಯಯದಲ್ಲಿರುತ್ತದೆ. ಕ್ರಿಯಾಪದವು ಕರ್ಮಪದದ ಲಿಂಗ, ವಚನಗಳನ್ನು ಅನುಸರಿಸಿ ಬಳಕೆಯಾಗುತ್ತದೆ.

ಉದಾ:- (1) ರೈತರಿಂದ ಬೆಳೆಯು ಬೆಳೆಯಲ್ಪಟ್ಟಿತು.

(2) ಯೋಧರಿಂದ ದೇಶವು ರಕ್ಷಿಸಲ್ಪಟ್ಟಿತು.

## ಲೇಖನ ಚಿಹ್ನೆಗಳು

| | | | |
|---|---|---|---|
| , | ಅಲ್ಪವಿರಾಮ | ^ | ಹಂಸಪಾದ |
| ; | ಅರ್ಧವಿರಾಮ | + | ಕಠಾರಿ ಚಿಹ್ನೆ |
| : | ವಿವರಣ ವಿರಾಮ | + | ಧನ ಚಿಹ್ನೆ |
| . | ವಿರಾಮ | - | ಋಣ ಚಿಹ್ನೆ |
| - | ಅಡ್ಡ ಗೀಟು | × | ಗುಣಾಕಾರ ಚಿಹ್ನೆ |
| ! | ಆಶ್ಚರ್ಯ ಸೂಚಕ | ÷ | ಭಾಗಾಕಾರ ಚಿಹ್ನೆ |
| ? | ಪ್ರಶ್ನಾರ್ಥಕ/ ಅನುಮಾನಸೂಚಕ | ? | ಏಕೆಂದರೆ |
| _ | ಕೊಡುಗೆರೆ (ಹೈಫನ್) | ∴ | ಆದ್ದರಿಂದ |
| ( ) | ಅಲ್ಪಾವರಣ | = | ಸಮ |
| { } | ಪುಷ್ಪಾವರಣ | > | ಹೆಚ್ಚು |
| [ ] | ದೀರ್ಘಾವರಣ | < | ಕಡಿಮೆ |
| ‘‘ ’’ | ಉದ್ಧರಣ | | |

## ಕೊಟ್ಟ ಅಂಶಗಳ ಆಧಾರದಿಂದ ಕಥೆ ರಚಿಸುವುದು.

(1) ಒಂದು ಕಾಡಿನಲ್ಲಿ ಹಲವಾರು ಪ್ರಾಣಿಗಳು ವಾಸ

(2) ವನರಾಜ ಸಿಂಹನಿಂದ ತೊಂದರೆ

(3) ಹಲವಾರು ಪ್ರಾಣಿಗಳು ಸಿಂಹಕ್ಕೆ ಬಲಿ

(4) ಎಲ್ಲ ಪ್ರಾಣಿಗಳ ಸಭೆ

(5) ಪ್ರತಿದಿನ ಒಂದೊಂದು ಪ್ರಾಣಿಯನ್ನು ಕಳಿಸಲು ನಿರ್ಧಾರ

(6) ಪ್ರತಿದಿನ ಒಂದು ಪ್ರಾಣಿಯ ಸರದಿ

(7) ಒಂದು ದಿನ ಮೊಲದ ಸರದಿ


(8) ತಡವಾಗಿ ಬಂದದ್ದು

(9) ಅದಕ್ಕಿಂತ ಬಲಿಷ್ಠ ಪ್ರಾಣಿಯನ್ನು ಬಾವಿಯಲ್ಲಿ ತೋರಿಸಿದ್ದು.

(10) ಅದು ಬಾವಿಗೆ ಬಿದ್ದು ಪ್ರಾಣಕಳೆದುಕೊಂಡದ್ದು.


## ಎಂಟನೆಯ ಇಯತ್ತೆ ಕನ್ನಡ ಸುಗಮಭಾರತಿ


| ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನ ನಿಷ್ಪತ್ತಿ |
| --- | --- |
| ಮಕ್ಕಳಿಗೆ ವ್ಯಕ್ತಿಗತ ಅಥವಾ ಸಾಮಾಜಿಕ ಸ್ವರೂಪದಲ್ಲಿ ಪ್ರೋತ್ಸಾಹನೆ ಕೊಡುವುದಕ್ಕಾಗಿ ಅವರಿಗೆ-<br>• ನಮ್ಮ ಭಾಷೆಯಲ್ಲಿ ಮಾತನಾಡಲು, ಚರ್ಚೆ ಮಾಡಲು, ಓದಲು ಅವಕಾಶ ಒದಗಿಸುವುದು.<br>• ಪಠ್ಯ ಹಾಗೂ ಪಠ್ಯೇತರ ಸಾಹಿತ್ಯ ಒದಗಿಸುವದು.<br>• ಗೆಳೆಯರೊಂದಿಗೆ ಹಾಗೂ ಶಿಕ್ಷಕರೊಂದಿಗೆ ಓದಿದ, ಕೇಳಿದ ಸಾಹಿತ್ಯ ಕುರಿತು ಚರ್ಚೆ ಮಾಡಲು ಅವಕಾಶ ಕೊಡುವದು.<br>• ಕನ್ನಡ ಭಾಷೆಯ ಸೂಕ್ಷ್ಮತೆಯ ಮೇಲೆ ಚರ್ಚೆಕೂಟ ಆಯೋಜಿಸುವುದು.<br>• ಸಕ್ರೀಯ ಹಾಗೂ ಜಾಗರೂಕರಿರುವ ಸಲುವಾಗಿ ತಯಾರಿಸುವ ಸಾಹಿತ್ಯ (ಉದಾ. ವರ್ತಮಾನ ಪತ್ರ, ಪತ್ರಿಕೆ, ದೂರದರ್ಶನ, ಚಿತ್ರಪಟ ಇತ್ಯಾದಿ) ನೋಡುವ, ಕೇಳುವ, ಓದುವ ಅವಕಾಶ ಮಾಡಿಕೊಡುವದು.<br>• ಕಲ್ಪನಾಶಕ್ತಿಯ, ಸೃಜನಶೀಲತೆಯ ವಿಕಾಸ ಮಾಡುವ ಕ್ರಿಯೆ ಉದಾ: ನಿಬಂಧ ಸ್ಪರ್ಧೆ, ಹಾಡಿನ ಸ್ಪರ್ಧೆ, ಭಾಷಣ ಸ್ಪರ್ಧೆ ಇತ್ಯಾದಿಗಳನ್ನು ಆಯೋಜಿಸುವುದು.<br>• ಹಾಡು, ಕವಿತೆ, ಕಥೆ, ಸಂವಾದ ಇತ್ಯಾದಿಗಳನ್ನು ಪಠ್ಯ ಹಾಗೂ ಪಠ್ಯೇತರ ಸಾಹಿತ್ಯ ಓದಲು, ಕೇಳಲು ಅವಕಾಶ ಒದಗಿಸುವದು.<br>• ಭಾಷೆಯ ಸಮೃದ್ಧಿಗಾಗಿ ಬಾಲ ಸಾಹಿತ್ಯ (ಕಥೆ, ಕವಿತೆ ಸಂವಾದ ಇತ್ಯಾದಿ) ಸಂಗ್ರಹ ಮಾಡಲು ಪ್ರೋತ್ಸಾಹನೆ ನೀಡುವುದು, ಅವುಗಳನ್ನು ಸಾದರಪಡಿಸಲು ಅವಕಾಶ ನೀಡುವುದು.<br>• ಮಾತಾಡುವಾಗ ನಾಣ್ಣುಡಿ, ಸುಭಾಷಿತ, ಸುವಿಚಾರಗಳನ್ನು ಬಳಸಲು ಮಕ್ಕಳಿಗೆ ಪ್ರೇರಣೆ ನೀಡುವದು.<br>• ವಿವಿಧ ವ್ಯವಸಾಯಗಳನ್ನು ಮಾಡುವ ಕುಶಲ ಕಾರ್ಮಿಕರ ಉದಾ. ಕುಂಬಾರ, ಬಡಿಗ, ಸಿಂಪಿಗ ಇತ್ಯಾದಿ ಸಂದರ್ಶನದ ಆಯೋಜನೆ ಮಾಡುವದು, ಮಕ್ಕಳಿಗೆ ಬೇರೆ-ಬೇರೆ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡುವದು.<br>• ಹೊಸ-ಹೊಸ ಶಬ್ದಗಳ ಅರ್ಥ ತಿಳಿದುಕೊಳ್ಳಲು ಶಬ್ದಕೋಶ ಬಳಸುವ ಪದ್ಧತಿ ತಿಳಿಸಿಕೊಡುವದು. | 08.LA.01 ಶಾಲೆಯ ಹಾಗೂ ಶಾಲಾಬಾಹ್ಯ ಪರಿಸರದಲ್ಲಿ ಕನ್ನಡ ಭಾಷೆಯಲ್ಲಿ ಮಾತನಾಡುತ್ತಾನೆ.<br>08.LA.02 ಪಠ್ಯ ಹಾಗೂ ಪಠ್ಯೇತರ ಲಿಖಿತ ಸಾಹಿತ್ಯ ಓದುತ್ತಾನೆ ಹಾಗೂ ಓದಿದ ವಿಷಯ ಕುರಿತು ಚರ್ಚೆ ಮಾಡುತ್ತಾನೆ.<br>08.LA.03 ಆಲಿಸಿದ, ಓದಿದ, ನೋಡಿದ ಭಾಷೆ ವಿಷಯ ಕುರಿತು ಗೆಳೆಯರೊಂದಿಗೆ, ಶಿಕ್ಷಕರೊಂದಿಗೆ ಚರ್ಚೆ ಮಾಡುತ್ತಾನೆ, ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.<br>08.LA.04 ಭಾಷೆಯ ಸೂಕ್ಷ್ಮತೆಗಳನ್ನು ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುತ್ತಾನೆ. ಯೋಗ್ಯ ವಾಕ್ಯಗಳನ್ನು ರಚಿಸುತ್ತಾನೆ.<br>08.LA.05 ವಿವಿಧ ಮಾಧ್ಯಮಗಳ ಮುಖಾಂತರ (ವರ್ತಮಾನ ಪತ್ರ, ದೂರದರ್ಶನ, ಚಿತ್ರಪಟ ಇತ್ಯಾದಿ) ತನ್ನ ಭಾಷೆಯಲ್ಲಿಯ ಹೊಸ-ಹೊಸ ಮಾಹಿತಿ ಪಡೆಯುತ್ತಾನೆ. ಭಾಷಿಕ ಜ್ಞಾನ ಬೆಳೆಸಿಕೊಳ್ಳುತ್ತಾನೆ.<br>08.LA.06 ತಾನು ಓದಿದ, ನೋಡಿದ, ಕೇಳಿದ ಮಾಹಿತಿ/ಜ್ಞಾನದ ಉಪಯೋಗ ಮಾಡಿಕೊಂಡು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವನು, ವಿಚಾರಗಳನ್ನು ವ್ಯಕ್ತಪಡಿಸುವನು, ಹಾಗೂ ಇತರರ ವಿಚಾರಗಳನ್ನು ಆಲಿಸುವನು.<br>08.LA.07 ಪಠ್ಯ ಹಾಗೂ ಪಠ್ಯೇತರ ಹಾಡು, ಕವಿತೆ, ಸಂವಾದಗಳನ್ನು ತಿಳಿದುಕೊಂಡು ಓದುವನು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವನು.<br>08.LA.08 ಬಾಲಸಾಹಿತ್ಯ- ಕಥೆ, ಹಾಡು, ಸಂವಾದ ಇತ್ಯಾದಿಗಳನ್ನು ಸಂಗ್ರಹಿಸುತ್ತಾನೆ. ಓದಿ ಆನಂದ ಪಡೆಯುತ್ತಾನೆ. ಸಾದರಪಡಿಸುತ್ತಾನೆ.<br>08.LA.09 ದೂರದರ್ಶನ ವೃತ್ತಪತ್ರಿಕೆಗಳಲ್ಲಿಯ ಬಾಲಸಾಹಿತ್ಯ- ಕಥೆ, ಕವಿತೆ, ಸಂವಾದ ಓದಿ ಆನಂದ ಪಡೆಯುತ್ತಾನೆ.<br>08.LA.10 ಮಕ್ಕಳು ಮಾತಾಡುವಾಗ ಯೋಗ್ಯ ನಾಣ್ಣುಡಿ, ಸುಭಾಷಿತಗಳನ್ನು ಬಳಸುವರು. ಅಸ್ವಾದ ಪಡೆಯುವರು.<br>08.LA.11 ಸ್ವಂತದ ಅನುಭವಗಳನ್ನು ಸ್ವಂತದ ಭಾಷಾ ಶೈಲಿಯಲ್ಲಿ ಹೇಳುತ್ತಾನೆ, ಬರೆಯುತ್ತಾನೆ.<br>08.LA.12 ಮಕ್ಕಳು ವ್ಯವಸಾಯದ ಕುರಿತು ಬೇರೆ-ಬೇರೆ ಪ್ರಶ್ನೆಗಳನ್ನು ಕೇಳುವರು. ವ್ಯವಸಾಯಗಳ ಬಗ್ಗೆ ಮಾಹಿತಿ ಪಡೆಯುವರು.<br>08.LA.13 ಶಬ್ದಕೋಶದ ಮುಖಾಂತರ ಹೊಸ ಶಬ್ದಗಳ ಅರ್ಥಗಳನ್ನು ತಿಳಿದು ಕೊಳ್ಳುವನು. |


































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ 411004.

कन्नड सुगमभारती इ. ८ वी

₹ 30.00